O.S.No: 373/2015
P.W.:1

ದಿನಾಂಕ 26-11-2025 ರಂದು ಸಾಕ್ಷಿಯನ್ನು ಈ ದಿನ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣವಚನ ಭೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ RM 5ನೇ ಪ್ರತಿವಾದಿಯವರ ವಕೀಲರಿಂದಃ**

ದಾವಾ ಪತ್ರವನ್ನು ತಯಾರಿಸಲು ನನ್ನ ವಕೀಲರಿಗೆ ನಾನೇ ಅನುಭವ ನೀಡಿರುತ್ತೇನೆ. ದಾವಾ ಆಸ್ತಿಯು ನನ್ನ ತಂದೆಯವರಿಗೆ ಹೇಗೆ ಬಂದಿದ್ದು ಎಂದು ನನಗೆ ಗೊತ್ತಿದೆ. ಅಕ್ರಮ ಸಕ್ರಮ ಮೂಲಕ ದಾವಾ ಆಸ್ತಿಯು ನನ್ನ ತಂದೆಯವರಿಗೆ ಬಂದಿರುತ್ತದೆ. ದಾವಾ ಆಸ್ತಿಯು ನನ್ನ ತಂದೆಯವರ ಸ್ವಯರ್ಜಿತ ಮತ್ತು ಸ್ವಂತ ಆಸ್ತಿ ಎಂದರೆ ಸರಿಯಲ್ಲ. ನನ್ನ ತಂದೆಯವರ ಜೀವಾಂತ ಕಾಲದಲ್ಲಿ ನಾನು ವಿದೇಶದಲ್ಲಿದ್ದೆ. ನನ್ನ ತಂದೆ ಮರಣ ಕಾಲದಲ್ಲಿ ನಾನು ವಿದೇಶದಲ್ಲಿದ್ದೆ. ನನ್ನ ತಂದೆಯವರ ಅಂತಿಮ ವಿದಿ ವಿದಾನ ಕಾರ್ಯಾಕ್ರಮದಲ್ಲಿ ನಾನು ಪಾಲ್ಗೊಳ್ಳಲಿಲ್ಲ. ನನ್ನ ತಂದೆಯವರು ವೀಲು ನಾಮೆ ಬರೆದು ಇಟ್ಟಿದ್ದ ವಿಚಾರ ನನಗೆ ಗೊತ್ತಿರಲಿಲ್ಲ. ನನ್ನ ತಂದೆಯವರು ವೀಲು ನಾಮೆಯನ್ನು ಬರೆದ ವಿಚಾರವನ್ನು ನಾನು ಪಾಲು ಕೇಳಲು ಹೋದ ಸಮಯ ನನಗೆ ತಿಳಿಯಿತು. ನನ್ನ ತಂದೆಯವರು ಸಾಯುವ 10 ವರ್ಷದ ಮೊದಲು ಅವರಿಗೆ ಸಾಮಾಜಿಕ ಜ್ಞಾನ ಮತ್ತು ತಿಳುವಳಿಕೆ ಸರಿಯಾಗಿತ್ತು. ಅದೇ ರೀತಿ ಸಾಯುವ 10 ವರ್ಷದ ಮೊದಲು ಅವರಿಗೆ ವ್ಯವಹಾರಿಕ ಜ್ಞಾನ ಒಳ್ಳೆಯದಿತ್ತು. ನನ್ನ ತಂದೆಯವರು ಮನೆಯಲ್ಲಿ ಮರಣ ಹೊಂದಿದ್ದರು ಎಂದರೆ ಸಾಕ್ಷಿಯು ಆ ಸಮಯ ನಾನು ವಿದೇಶದಲ್ಲಿದ್ದೆ ಎಂದು ನುಡಿಯುತ್ತಾರೆ. ನನ್ನ ತಂದೆಯವರು ವಯೋ ಸಹಜವಾಗಿ ಮರಣ ಹೊಂದಿದ್ದರು ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆಯವರನ್ನು ನಾನು ವೈಯಕ್ತಿಕವಾಗಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು ಇಲ್ಲ.

(ಪ್ರತಿವಾದಿಯ ಪರ ವಕೀಲರು ಮುಂದಿನ ಪಾಟೀ ಸವಾಲಿಗಾಗಿ ಕಾಲವಕಾಶ ಕೋರಿದ್ದರಿಂದ ಅನುಮತಿ ನೀಡಿ ಮುಂದೂಡಲಾಯಿತು.)

ನನ್ನ ಉಕ್ತಲೇಖನ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.
ಓದಿ, ಹೇಳಿ, ಕೇಳಿ ಸರಿ ಇದೆ.

1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ
ದರ್ಜೆ ನ್ಯಾಯಿಕ ದಂಢಾಧಿಕಾರಿ, ಪುತ್ತೂರು, ದ.ಕ.